(ಇಂದು ದಿನಾಂಕ:27-04-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನನ್ನ ಮಾಹಿತಿಯನ್ನು ಪಡೆದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬೆರಳಚ್ಚು ಮಾಡಲಾಗಿದೆ. ಮುಖ್ಯ ವಿಚಾರಣೆಯಲ್ಲಿ ತೋರಿಸಿದ ಷಡಾಕ್ಷರಪ್ಪ ಹೆಸರು ನನ್ನದೇ ಇರುತ್ತದೆ. ಸರ್ವೇ ನಂ.4 ರಲ್ಲಿ 2 ಎಕರೆ ಜಮೀನು ನನ್ನ ಹೆಸರಲ್ಲಿ ಇರುತ್ತದೆ. ಸದರಿ ಜಮೀನನ್ನು 1994 ರಲ್ಲಿ ಲಾಯಕ್ ಸಾಬರವರ ಬಳಿಯಿಂದ ನಾನು ಖರೀದಿ ಮಾಡಿರುತ್ತೇನೆ. ನನ್ನ ತಂದೆ ತಾಯಿಯವರು ಮರಣ ಹೊಂದಿದ ದಿನಾಂಕ ನನಗೆ ನೆನಪಿಲ್ಲ. ಶಕುಂತಲಾಬಾಯಿ ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಲಾದ ಶಕುಂತಲಾಬಾಯಿರವರ ಮರಣ ಹೊಂದಿದ ದಿನಾಂಕದ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಅದನ್ನು ನಾನು ಹೇಳಿ ಬರೆಸಿಲ್ಲ.
2. ದಾವಾ ಆಸ್ತಿಯನ್ನು ಮೃತ ಶಕುಂತಲಾಬಾಯಿರವರು ಯಾರ ಬಳಿಯಿಂದ ಖರೀದಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ಜಮೀನಿನ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯರ ಜಮೀನು 11 ಎಕರೆ 28 ಗುಂಟೆ ಜಮೀನು ಇದ್ದು, ನಾನು ಖರೀದಿ ಪತ್ರವನ್ನು ನೋಡಿರುತ್ತೇನೆ. ಖರೀದಿ ಪತ್ರವನ್ನು ಬಹಳ ದಿನಗಳ ಹಿಂದೆ ನೋಡಿರುತ್ತೇನೆ. ಮೃತ ಶಕುಂತಲಾಬಾಯಿ ರವರಿಗೆ ಮಾರಾಟ ಮಾಡಿದ ವ್ಯಕ್ತಿಗಳ ಖರೀದಿ ಪತ್ರಗಳನ್ನು ನಾನು ನೋಡಿಲ್ಲ. ಪೋಟ ಖರಾಬ ಬಗ್ಗೆ ಸರ್ವೇಯರ್ ಟಿಪ್ಪಣಿ ಆಧಾರದ ಮೇಲೆ ನಿರ್ಧಾರ ಮಾಡುತ್ತಾರೆ ಎಂದರೆ ಸರಿ. ಸರ್ವೇ ನಂ.4 ರಲ್ಲಿ ಯಾರ ಯಾರ ಜಮೀನಿನಲ್ಲಿ ಎಷ್ಟೆಷ್ಟು ಜಮೀನು ಖರಾಬ ಹೋಗಿದೆ ಅಂತಾ ನನಗೆ ಮಾಹಿತಿ ಇಲ್ಲ.
3. ಮೃತ ಶಕುಂತಲಾಬಾಯಿ ರವರಿಗೆ ನಾಲ್ಕು ಜನ ಗಂಡು ಮಕ್ಕಳು. ಪ್ರತಿವಾದಿಯರು ಖರೀದಿ ಪತ್ರದ ಪ್ರಕಾರ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಜಮೀನನ್ನು ವಾದಿಯರು ಯಾರಿಗೆ

ಲೀಜ್ ಕೊಟ್ಟಿದ್ದಾರೆ ಮತ್ತು ಯಾರು ಸಾಗುವಳಿ ಮಾಡುತ್ತಾರೆ ನನಗೆ ಗೊತ್ತಿಲ್ಲ. ವಾದಿಯರು 11 ಎಕರೆ 28 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಕೇವಲ 9 ಎಕರೆ 11 ಗುಂಟೆ ಜಮೀನಿನಲ್ಲಿ ಮಾತ್ರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯರು 11 ಎಕರೆ 28 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿ ಸರ್ವೇ ನಂ.4 ರಲ್ಲಿ ಎಷ್ಟು ಕೋಡಿ ಆಗಿರುತ್ತದೆ ನನಗೆ ಗೊತ್ತಿಲ್ಲ. ನನ್ನ ಜಮೀನು ಎಷ್ಟನೇ ಹಿಸ್ಸಾ ನಂಬರ ಗೊತ್ತಿಲ್ಲ. ನನಗೆ ದಾವಾ ಆಸ್ತಿ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು